**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಬಾಗಲಕೋಟೆ, ಉಪಸ್ಥಿತಿ- ಜಮಖಂಡಿ**

**ಸ್ಪೇಷಲ್ ಕೇಸ್ ನಂ. 5013/2023**
**ಪಿಡಬ್ಲ್ಯೂ-7**
**ಸಿಡಬ್ಲ್ಯೂ-17**

ಹೆಸರು : ಕರುಣೇಶಗೌಡ ಜೆ. ತಂದೆಃಪಂಪನಗೌಡ ಜೆ.

ವಯಸ್ಸು : 48 ವರ್ಷ

ಉದ್ಯೋಗ : ಸಿ.ಪಿ.ಐ., ಕರ್ನಾಟಕ ಲೋಕಾಯುಕ್ತ, ಧಾರವಾಡ

ವಾಸಸ್ಥಳ : ಧಾರವಾಡ

====

ಪ್ರಭಾರ ಸರ್ಕಾರಿ ಅಭಿಯೋಜಕರು ಗೈರುಹಾಜರಾಗಿದ್ದು, ಸಾಕ್ಷಿಯು ತಾನು ತನಿಖಾಧಿಕಾರಿಯಾಗಿದ್ದು, ಸರ್ಕಾರಿ ಅಭಿಯೋಜಕರ ಸಹಾಯ ಇಲ್ಲದೇ ಸಾಕ್ಷಿ ನುಡಿಯುವುದಾಗಿ ಹೇಳಿರುವುದರಿಂದ ಸಾಕ್ಷಿಗೆ ಸಾಕ್ಷಿ ನುಡಿಯಲು ಅನುಮತಿಸಿ, ಸಾಕ್ಷಿ ಹೇಳಿಕೆಯನ್ನು ಪಡೆಯಲಾಯಿತು.

**ಸಾಕ್ಷಿಗೆ ಇಂದು ದಿನಾಂಕ 22.12.2025 ರಂದು ಪ್ರಮಾಣವಚನ ಬೋಧಿಸಲಾಯಿತು. ಮುಖ್ಯ ವಿಚಾರಣೆಃಸಾಕ್ಷಿಯಿಂದ**

ನಾನು ದಿನಾಂಕ 24.01.2020 ರಿಂದ 04.07.2022 ರ ವರೆಗೆ ಬನಹಟ್ಟಿ ಪೋಲಿಸ ವೃತ್ತನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. 25.09.2020 ರಂದು ಜಮಖಂಡಿ ಡಿ.ವೈ.ಎಸ್.ಪಿ. ರವರು ಪ್ರಸ್ತುತ ಪ್ರಕರಣದ ತನಿಖೆಯನ್ನು ಮುಂದುವರೆಸುವಂತೆ ಆದೇಶಿಸಿದ ಮೇರೆಗೆ ಈ ಪ್ರಕರಣದ ಮುಂದಿನತನಿಖೆಯನ್ನು ಚಾ.ಸಾ.16 ರವರಿಂದ ವಹಿಸಿಕೊಂಡು, ಅಲ್ಲಿಯವರೆಗೆ ಮಾದಡಿ ತನಿಖೆಯ ಕಾಗದಪತ್ರಗಳನ್ನು ಪರಿಶೀಲಿಸಿರುತ್ತೇನೆ.

3. 07.10.2020 ರಂದು ಜಪ್ತಾದ ಮುದ್ದೆಮಾಲು ಗಾಂಜಾವನ್ನು ಇನ್ವೆಂಟ್ರಿ ಮಾಡುವಂತೆ ಜಮಖಂಡಿ ಜೆ ಎಂ ಎಫ್ ಸಿ ನ್ಯಾಯಾಧೀಶರಿಗೆ ಮನವಿ ನೀಡಿರುತ್ತೇನೆ. ಸದರಿ **ಮನವಿ ನಿ.ಪಿ.14** ರಂತೆ, ನನ್ನ ಸಹಿ **ನಿ.ಪಿ.14(ಎ)** ರಂತೆ ಇದೆ. ದಿನಾಂಕ 08.10.2020 ರಂದು ನಾನು ಮೆಜಿಸ್ಟ್ರೇಟ ರವರ ಮುಂದೆ ಇನ್ವೆಂಟ್ರಿ ಮಾಡಿಕೊಂಡು ಬರಲು ಚಾ.ಸಾ.15 ರವರಿಗೆ ಸೂಚಿಸಿದ ಮೇರೆಗೆ, ಅವರು ನ್ಯಾಯಾಲಯದ ಮುಂದೆ ಇನ್ವೆಂಟ್ರಿ ಮಾಡಿಸಿಕೊಂಡು ಬಂದು, ನನಗೆ ವರದಿ, ಅನೆಕ್ಷರ್-1 ಮತ್ತು ಅನೆಕ್ಷರ್-2

ಹಾಗೂ 4 ಫೋಟೋಗಳನ್ನು ನನಗೆ ನೀಡಿರುತ್ತಾರೆ. ಚಾ.ಸಾ.15 ರವರು **ನೀಡಿದ ವರದಿ ನಿ.ಪಿ.15 ರಂತೆ, ನನ್ನ ಸಹಿ ನಿ.ಪಿ.15(ಎ) ರಂತೆ ಇದೆ. ಅನೆಕ್ಷರ್-1 ಮತ್ತು 2 ನಿ.ಪಿ.16 ಮತ್ತು 17 ರಂತೆ ಇವೆ. ಫೋಟೋಗಳು ನಿ.ಪಿ.18 ರಿಂದ 21** ರಂತೆ ಇವೆ. ಚಾ.ಸಾ.15 ರವರು ಇನ್ವೆಂಟ್ರಿ ಕಾಲಕ್ಕೆ **ಸ್ಯಾಂಪಲ್‌ಗಾಗಿ ತೆಗೆದ ಮುದ್ದೆಮಾಲನ್ನು** ಸಹ ನನಗೆ ನೀಡಿರುತ್ತಾರೆ. ಅದು **ಮು.ಮಾ.2** ರಂತೆ ಇದೆ. ಮು.ಮಾ.2 ರೊಂದಿಗೆ ಮುದ್ದೆಮಾಲಿನೊಂದಿಗೆ ರೇಡ್ ಸಮಯದಲ್ಲಿ ವಶಪಡಿಸಿಕೊಂಡಿದ್ದ ಉಳಿದ ಗಾಂಜಾವನ್ನು ಸಹ ನನ್ನ ಕಬ್ಜೆಗೆ ಚಾ.ಸಾ.15 ರವರು ನೀಡಿರುತ್ತಾರೆ.

4. 03.11.2020 ರಂದು ಗೌರವಾನ್ವಿತ ಜಿಲ್ಲಾ ನ್ಯಾಯಾಲಯ ಬಾಗಲಕೋಟೆ ಇವರಿಗೆ ಸ್ಯಾಂಪಲ್‌ಗಾಗಿ ವಶಪಡಿಸಿಕೊಂಡ ಮುದ್ದೆಮಾಲುಗಳನ್ನು ಹೊರತುಪಡಿಸಿ ಉಳಿದ ಗಾಂಜಾವನ್ನು ಜಿಲ್ಲಾ ಡಿಸ್ಪೋಸಲ್ ಕಮಿಟಿಗೆ ವಿಲೇವಾರಿ ಮಾಡಲು ಹಸ್ತಾಂತರಿಸಲು ಅನುಮತಿ ಕೋರಿ ಪತ್ರ ಬರೆದಿರುತ್ತೇನೆ. ಸದರಿ ನನ್ನ **ಮನವಿ ನಿ.ಪಿ.22 ರಂತೆ ನನ್ನ ಸಹಿ ನಿ.ಪಿ.22(ಎ)ರಂತೆ** ಇದೆ.

5. ದಿನಾಂಕ 02.01.2021 ರಂದು ನ್ಯಾಯಾಲಯದಿಂದ **ಅನುಮತಿಪತ್ರವನ್ನು** ಸ್ವೀಕರಿಸಿರುತ್ತೇನೆ. ಅದು **ನಿ.ಪಿ.23** ರಂತೆ ಹಾಗೂ ನನ್ನ ಸಹಿ **ನಿ.ಪಿ.23(ಎ)** ರಂತೆ ಇದೆ. ನಂತರ ದಿನಾಂಕ 03.02.2021 ರಂದು ಸದರಿ ಮುದ್ದೆಮಾಲನ್ನು ಡಿಸ್ಪೋಸಲ್ ಕಮಿಟಿಯ ಮುಖಾಂತರ ವಿಲೇಮಾಡಲು ಎಸ್ ಪಿ ಬಾಗಲಕೋಟೆ ರವರಿಗೆ ಕಳಿಸಿರುತ್ತೇನೆ. ದಿನಾಂಕ 05.02.2021 ರಂದು ಪ್ರಕರಣದ ತನಿಖೆ ಮುಗಿಸಿ, ಆರೋರೇಪಿಗಳ ವಿರುದ್ಧ ಆರೋಪ ಸಾಬೀತಾಗಿದ್ದು ಕಂಡುಬಂದಿದ್ದರಿಂದ ಅವರ ವಿರುದ್ಧ ದೋಷಾರೋಪಣೆಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎ ಎಂ ಎಂ ವಕೀಲರಿಂದ</u>**

6. ಚಾ.ಸಾ.16 ರವರಿದ ಕಡತ ಪಡೆದನಂತರ ನಾನು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿರುತ್ತೇನೆ. ನಾನು ಚಾ.ಸಾ.16 ರವರಿಂದ ತನಿಖೆಯನ್ನು ವಹಿಸಿಕೊಂಡ ನಂತರ ಘಟನೆಯ ನಂತರ ಮಾಹಿತಿಯನ್ನು ಸ್ವೀಕರಿಸಿದ ನಂತರ ಚಾ.ಸಾ.1 ರವರು

**ಪಿಡಬ್ಲ್ಯೂ-7**
**ಸಿಡಬ್ಲ್ಯೂ-17**

ಅದನ್ನು ಬರವಣಿಗೆಯಲ್ಲಿ ಇಳಿಸಿ, ಮೇಲಾಧಿಕಾರಿಗಳಿಗೆ ತಿಳಿಸಿದ ಬಗ್ಗೆ ಲಿಖಿತವಾದ ದಾಖಲೆಗಳು ಕಂಡುಬಂದಿಲ್ಲ. ಚಾ.ಸಾ.1 ರವರು ಮಾಹಿತಿಯನ್ನು ಬರವಣಿಗೆಯಲ್ಲಿ ಇಳಿಸಿ ಮೇಲಾಧಿಕಾರಿಗಳಿಗೆ ಸಲ್ಲಿಸಿದ ಬಗ್ಗೆ ಯಾವುದೇ ಲಿಖಿತ ದಾಖಲೆಗಳು ಇಲ್ಲ. ಕಚ್ಚಾನಕಾಶೆಯಲ್ಲಿ ಸರ್ವೇ ನಂಬರ ಬರೆದಿರುವುದಿಲ್ಲ. ಆದರೆ ಸರ್ವೇ ನಂಬರ 98/2/1-ಅ ತನಿಖೆಯಲ್ಲಿ ಕಂಡುಬಂದಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ತನಿಖೆಯಲ್ಲಿ ಸಂಗ್ರಹಿಸಿದ ಆರ್ ಟಿ ಸಿ ಯಲ್ಲಿ ಸ.ನಂ.98/1 ಅ ಇದೆ ಆದರೆ ಸ.ನಂ.98/2/1 ಅ ಇಲ್ಲ ಅಂದರೆ ಸರಿ. ಪ್ರಸ್ತುತ ಪ್ರಕರಣದಲ್ಲಿ ರೇಡ್ ಮಾಡಿ ಗಾಂಜಾ ವಶಪಡಿಸಿಕೊಂಡ ದಿನದಿಂದ ನಾನು ಚಾ.ಸಾ.16 ರವರಿಂದ ತನಿಖೆ ವಹಿಸಿಕೊಳ್ಳುವ ವರೆಗೆ ಸದರಿ ವಶಪಡಿಸಿಕೊಂಡ ಮುದೆದಮಾಲು ಎಲ್ಲಿ ಹಾಗೂ ಯಾರ ಕಬ್ಜೆಯಲ್ಲಿತ್ತು ಎಂಬುದರ ಬಗ್ಗೆ ನಾನು ಪರಿಶೀಲಿಸಿ, ಮುದ್ದೆಮಾಲು ವಹಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿಲ್ಲ ಅಂದರೆ ಸರಿ.

7. ಗಾಂಜಾವನ್ನು ರೇಡ್ ಮಾಡಿ ಅಮಾನತ್ತುಪಡಿಸಿಕೊಂಡ ದಿನಾಂಕ 04.11.2019 ರಿಂದ 07.10.2020 ರವರೆಗೆ ಗಾಂಜಾ ಇನ್ವೆಂಟ್ರಿ ಮಾಡಲು ವಿಳಂಬ ಏಕೆ ಆಗಿದೆ ಎಂದು ತನಿಖೆಯಲ್ಲಿ ಪರಿಶೀಲಿಸಿದ್ದೀರಾ ಅಂದರೆ, ಹಿಂದಿನ ತನಿಖಾಧಿಕಾರಿಗಳು ಮಾಡಿರಲಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ಹಿಂದಿನ ಅಧಿಕಾರಿಗಳು ಇನ್ವೆಂಟ್ರಿ ಮಾಡಲು ಏಕೆ ವಿಳಂಬ ಮಾಡಿದರು ಎಂದು ನಾನು ತನಿಖೆಯಲ್ಲಿ ಪರಿಶೀಲಿಸಿಲ್ಲ. ಕೆಸಲದ ಒತ್ತಡದಿಂದ ಹಿಂದಿನ ಅಧಿಕಾರಿಗಳು ಮಾಡಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ನಿ.ಪಿ.3 ರಿಂದ 5 ಫೊಟೋಗಳನ್ನು ತೆಗೆದಿರುವ ಕ್ಯಾಮೆರಾದ ಬಗ್ಗೆ ನಿ.ಪಿ.12 ರಲ್ಲಿ ನಮೂದು ಇದೆ. ನಿ.ಪಿ.3 ರಿಂದ 5 ಫೋಟೊ ತೆಗೆದ ಬಗ್ಗೆ ಬಿಲ್ಲುಗಳನ್ನು ಕ್ಲೇಮ್ ಸಲುವಾಗಿ ಎಸ್.ಪಿ. ಕಚೇರಿಗೆ ಕಳುಹಿಸಿರುತ್ತೇವೆ. ನಾನು ತನಿಖೆಯ ಸಮಯದಲ್ಲಿ ಫೋಟೋ ತೆಗೆದ ಬಗ್ಗೆ ಸಿ.ಡಿ. ಅಥವಾ ಪೆನಡ್ರೈವ ಹಾಜರುಪಡಿಸಿರುವುದನ್ನು ಪರಿಶೀಲಿಸಿದ್ದೀರಾ ಅಂದರೆ, ಅವರು ಹಾಜರುಪಡಿಸಿಲ್ಲ ಎಂದು ಸಾಕ್ಷಿ ಉತ್ತರಿಸುತ್ತಾರೆ. ಇನ್ವೆಂಟ್ರಿ ಕಾಲಕ್ಕೆ ತೆಗೆದ ನಿ.ಪಿ.18 ರಿಂದ 21 ಫೋಟೋಗಳ ಬಗ್ಗೆ 65-ಬಿ ಪ್ರಮಾಣಪತ್ರ ಪಡೆದುಕೊಂಡಿಲ್ಲ. ನಿ.ಪಿ.18 ರಿಂದ 21 ತೆಗೆದ ಬಗ್ಗೆ ಸಿ.ಡಿ. ಅಥವಾ ಪೆನಡ್ರೈವ ಪಡೆದುಕೊಂಡಿಲ್ಲ.

8. ಸ.ನಂ.98/1 ಅ ಜಮೀನಿನ ಮಾಲೀಕರು ಯಾರು ಎಂದು ಪರಿಶೀಲಿಸಿ, ಅವರ ಹೇಳಿಕೆಗಳನ್ನು ಸಹ ಹಿಂದಿನ ತನಿಖಾಧಿಕಾರಿಗಳು ಪಡೆದಿರುತ್ತಾರೆ. ಪ್ರಸ್ತುತ ಆರೋಪಿಗಳ ಹೆಸರು ಸ.ನಂ.98/1 ಅ ರಲ್ಲಿ ಆರೋಪಿಗಳ ಹೆಸರು ಇಲ್ಲ ಅಂದರೆ ಸರಿಯಲ್ಲ. ಈ ಮಾತು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾ.ಸಾ.1 ರವರಿಗೆ ಅನುಕೂಲಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

9. ನಾನು ಜೆ ಎಂ ಎಫ್ ಸಿ ಮುಂದೆ ಇನ್ವೆಂಟ್ರಿ ಮಾಡಿಸಲು ಚಾ.ಸಾ.15 ರವರನ್ನು ನೇಮಿಸಿಲ್ಲ ಅಂದರೆ ಸರಿಯಲ್ಲ. ಇನ್ವೆಂಟ್ರಿ ಮಾಡಿದ ನಂತರ ಚಾ.ಸಾ.15 ರವರು ನನಗೆ ಫೋಟೋ, ಮು.ಮಾ.2, ಅನೆಕ್ಷರ್-1 ಮತ್ತು 2 ನ್ನು ಹಾಜರುಪಡಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡಿಲ್ಲ ಎಂದು ತನಿಖೆಯ ಕಾಲದಲ್ಲಿ ಕಂಡುಬಂದರೂ ಸಹ, ಆರೋಪಿತರ ವಿರುದ್ಧ ಸುಳ್ಳು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಇನ್ವೆಂಟ್ರಿ ಮಾಡಿದ ನಂತರ ನಾನು ಮುದ್ದೆಮಾಲನ್ನು ಎಲ್ಲಿ ಇಟ್ಟಿದ್ದೆ ಎಂದು ತನಿಖೆಯಲ್ಲಿ ಅಳವಡಿಸಿಕೊಂಡಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ- ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ.ಕೇ. ಸರಿ ಅದೆ.

MAHAMED IMTHIYAZ AHAMED
Digitally signed by MAHAMED IMTHIYAZ AHAMED
Date: 2025.12.22 15:59:11 +0530

1 ನೇ ಅಪರ ಜಿಲ್ಲಾ ವ ಸತ್ರ ನ್ಯಾಯಾಧೀಶರು,
ಬಾಗಲಕೋಟ, ಉಪಸ್ಥಿತಿ ಜಮಖಂಡಿ.